ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ.28/2022

| | | |
|---|---|---|
| ಸಾಕ್ಷಿದಾರರ ಹೆಸರು | ಯಶೋಧಾ | ಸಿ.ಡಬ್ಲ್ಯೂ: 2 ಪಿ.ಡಬ್ಲ್ಯೂ: 3 |
| ಗಂಡನ ಹೆಸರು | ಶ್ರೀಕಂಠೇಗೌಡ | |
| ವಯಸ್ಸು | 67 ವರ್ಷ | |
| ಉದ್ಯೋಗ | ಗೃಹಿಣಿ | |
| ವಾಸ ಸ್ಥಳ | ಬಸ್ಕಿ | |

ದಿನಾಂಕ: 20.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪ್ರಭಾರ **ಸ.ಸ.ಅ.** ರವರಿಂದ (ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿ ವಿಚಾರಣೆ )

1. ಲಕ್ಷ್ಮಣ್ ಮತ್ತು ರೋಶನ್ ಎಂಬ ಆರೋಪಿಗಳು ನನಗೆ ಗೊತ್ತು. ಅವರು ನಮ್ಮ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ದಿ: 26.08.2015 ರಂದು ಬೆಳಿಗ್ಗೆ 8.00 ಗಂಟೆಗೆ ನಮ್ಮ ಹಳೆ ಮನೆಯಲ್ಲಿ ದಾಸ್ತಾನು ಮಾಡಿದ್ದ ಕಾಳು ಮೆಣಸನ್ನು ನೋಡಲು ಹೋಗಿರುತ್ತೇನೆ. ಮನೆಯ ಹಿಂದುಗಡೆಯ ಬಾಗಿಲಿನ ಬಳಿ ಕಾಳು ಮೆಣಸು ಬಿದ್ದಿರುವುದು ಕಂಡು ಬಂದಿರುತ್ತದೆ. ನಾನು ಚಾಸಾ.1 ರವರನ್ನು ಕರೆದು ಕಾಳು ಮೆಣಸು ಬಿದ್ದಿರುವ ಬಗ್ಗೆ ತಿಳಿಸಿರುತ್ತೇನೆ. ಚಾಸಾ.1 ರವರು ಬಂದು ನೋಡಿದಾಗ ಕಾಳು ಮೆಣಸು ದಾಸ್ತಾನು ಮಾಡಿದ ರೂಮ್ ನ ಬೀಗವನ್ನು ಒಡೆದಿರುವುದು ಕಂಡು ಬಂದಿರುತ್ತದೆ. ಸದರಿ ರೂಮ್ ನ ಅಟ್ಟದ ಮುಚ್ಚಳಿಕೆಯನ್ನು ತೆರೆದಿರುವುದು ಕಂಡು ಬಂದಿರುತ್ತದೆ. ಸದರಿ ರೂಮ್ ನಲ್ಲಿ ದಾಸ್ತಾನು ಮಾಡಿದ್ದ 50 ಮೂಟೆಯಲ್ಲಿ 1 ಮೂಟೆಯು ಕಳ್ಳತನ ಆಗಿರುವುದು ಕಂಡು ಬಂದಿರುತ್ತದೆ. ದಿ: 26.08.2015 ರಂದೇ ಸಂಜೆ ನಾನು ಮತ್ತು ಚಾಸಾ.1 ರವರು ಪೊಲೀಸ್ ಠಾಣೆಗೆ ದೂರು ನೀಡಿರುತ್ತೇವೆ. ದಿ: 27.08.2015 ರಂದು ಪೊಲೀಸರು ಸ್ಥಳಕ್ಕೆ ಬಂದು ಪಂಚರ ಸಮಕ್ಷಮ 10.30 ರಿಂದ 11.30 ಗಂಟೆ

ಸಮಯದಲ್ಲಿ ಮಹಜರ್ ಮಾಡಿರುತ್ತಾರೆ. ನಂತರ ಅದೇ ದಿನ ಪೊಲೀಸರು ಮತ್ತೆ ಬಂದು 11.30 ರಿಂದ 12.30 ರವರೆಗೆ ಮಹಜರ್ ಮಾಡಿ ಕತ್ತಿ, ಬೀಗವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಮ್ಮ ತೋಟದಲ್ಲಿ ಕೆಲಸ ಮಾಡುತ್ತಿದ್ದ 1 ರಿಂದ 3 ನೇ ಆರೋಪಿಗಳು ಸದರಿ ಕಾಳು ಮೆಣಸು ದಾಸ್ತಾನು ಮಾಡಿದ್ದ ಹಳೆಯ ಮನೆಯಲ್ಲಿಯೇ ವಾಸವಾಗಿದ್ದು ಸದರಿ ದಿನ ನಾವು ನೋಡುವಾಗ 1 ರಿಂದ 3 ನೇ ಆರೋಪಿಗಳು ಸದರಿ ಮನೆಯಲ್ಲಿ ಕಂಡು ಬರದ ಕಾರಣ ಅವರೇ ಈ ಕೃತ್ಯವನ್ನು ಎಸಗಿರುತ್ತಾರೆ ಎಂದು ನಮಗೆ ತಿಳಿದು ಬಂದಿರುತ್ತದೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

**ಮರು ವಿಚಾರಣೆ:** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ